ಅಸಲು ದಾವೆ ನಂ.60/2015

ಡಿ.ಡಬ್ಲೂಃ 1- ಶಂಕರ್ ರೆಡ್ಡಿ ಬಿನ್ ಚಿಕ್ಕತಿಪ್ಪಾರೆಡ್ಡಿ

ದಿನಾಂಕಃ 31/07/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ವಾದಿಯರ ಪರವಾಗಿ ಶ್ರೀ ಎಸ್.ಆರ್. ವಕೀಲರಿಂದ**

1. ನಾನು ಈ ದಾವೆಯ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ವಾದಿಯರು ಈ ದಾವೆಯನ್ನು ಸುಮಾರು 9 ಐಟಂ ಸ್ವತ್ತುಗಳ ಮೇಲೆ ಹಾಕಿರುತ್ತಾರೆ. ನನಗೆ ಅವುಗಳ ಸರ್ವೆ ಸಂಖ್ಯೆಗಳನ್ನು ಹೇಳಲು ಬರುವುದಿಲ್ಲ. ವಾದಿಯರು ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತುಗಳ ಎಲ್ಲಾ ದಾಖಲೆಗಳು ನಮ್ಮ ತಂದೆಯಾದ ಚಿಕ್ಕ ತಿಪ್ಪಾರೆಡ್ಡಿ ರವರ ಹೆಸರಿನಲ್ಲಿರುತ್ತವೆ. ನಾನು 1971 ರಲ್ಲಿ ಹುಟ್ಟಿರುತ್ತೇನೆ.

2. ನಮ್ಮ ತಂದೆಯು 1959 ರಲ್ಲಿ ಐಟಂ ನಂ.3 ಸ್ವತ್ತನ್ನು ಖರೀದಿಸಿರುತ್ತಾರೆ ಎನ್ನುವ ಸೂಚನೆಗೆ ಸಾಕ್ಷಿಯು ಸದರಿ ಜಮೀನು 5 ಎಕರೆ 2 ಗುಂಟೆ ಇದ್ದು ಅದರ ಪೈಕಿ 2.5 ಎಕರೆ ಜಮೀನನ್ನು 1953 ಮತ್ತು ಉಳಿದ ಜಮೀನನ್ನು 1959 ರಲ್ಲಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ನಮ್ಮ ತಂದೆಯು ತಮ್ಮೇಗೌಡ ರವರಿಂದ ಸಾಲ ಪಡೆದು ಖರೀದಿ ಮಾಡಿದರು. ಆ ಸಮಯದಲ್ಲಿ ನಮ್ಮ ತಂದೆಯು ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಸರಿ. ನಮ್ಮ ತಂದೆ ತಾಯಿಯ ಮಕ್ಕಳಲ್ಲಿ ಹಿರಿಯವರು 1 ನೇ ವಾದಿಯಾಗಿರುತ್ತಾರೆ ಮತ್ತು ಗಂಡು ಮಕ್ಕಳಲ್ಲಿ ಹಿರಿಯವರು 1 ನೇ ವಾದಿಯಾಗಿರುತ್ತಾರೆ. ನಾನು ನನ್ನ ತಾತ ಗುರುವಾರೆಡ್ಡಿ ಮತ್ತು ಅಜ್ಜಿ ದುಗ್ಗಮ್ಮ ರವರನ್ನು ನೋಡಿರುವುದಿಲ್ಲ. ಅವರಿಗೆ ಒಬ್ಬನೇ ಮಗ ಇದ್ದು ಅವರು ನಮ್ಮ ತಂದೆ ಚಿಕ್ಕ ತಿಪ್ಪಾರೆಡ್ಡಿ ಎಂದರೆ ಸರಿ. ನಮ್ಮ ತಂದೆಯನ್ನು ಚಿಕ್ಕ ತಿಪ್ಪಾರೆಡ್ಡಿ ಅಲಿಯಾಸ್ ತಿಪ್ಪಾರೆಡ್ಡಿ ಎಂದು ಕರೆಯುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ವಯಸ್ಸು ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ಅವರು ನನಗಿಂತ ಸುಮಾರು 20 ವರ್ಷ ಹಿರಿಯವರು. ನಾನು ನಮ್ಮ ತಂದೆ ತಾಯಿಯ ಮಕ್ಕಳಲ್ಲಿ 8 ನೇ ಯವನು. ನಮ್ಮ ತಂದೆ ಇರುವಾಗ 1 ನೇ ಪ್ರತಿವಾದಿಯೇ ನಮ್ಮ ಕುಟುಂಬದ ಉಸ್ತುವಾರಿ ಮಾಡುತ್ತಿದ್ದರು ಎಂದರೆ ಸರಿಯಲ್ಲ ಅದರೆ ನಮ್ಮ ತಂದೆ ಮಾಡುತ್ತಿದ್ದರು.

3. ಈಗ ನಾವು ಪ್ರತಿವಾದಿಯರು ಮತ್ತು ವಾದಿಯರು ಬೇರೆ ಬೇರೆ ವಾಸವಾಗಿರುತ್ತೇವೆ. ದಾವಾ ಸ್ವತ್ತುಗಳೆಲ್ಲವೂ ನಮ್ಮ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಐಟಂ ನಂ.3 ನ್ನು ಹೊರತು ಪಡಿಸಿ ಉಳಿದೆಲ್ಲ ಒಟ್ಟು ಕುಟುಂಬದ ಸ್ವತ್ತುಗಳು ಎಂದು ನುಡಿಯುತ್ತಾರೆ. ಐಟಂ ನಂ.3 ಸ್ವತ್ತು ಹೊರತು ಪಡಿಸಿ ಉಳಿದೆಲ್ಲ ಸ್ವತ್ತುಗಳಲ್ಲಿ ವಾದಿಯರಿಗೆ ಭಾಗ ಕೊಡಲು ನಮ್ಮ ಯಾವುದೇ ತಕರಾರು ಇರುವುದಿಲ್ಲ. ದಾವಾ ಐಟಂ ನಂ.1 ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಮತ್ತು ಅದನ್ನು ನಮ್ಮ ತಂದೆಯು 1 ನೇ ಪ್ರತಿವಾದಿಯ ಹೆಸರಿಗೆ ಸರ್ಕಾರದಿಂದ

ಮಂಜೂರು ಮಾಡಿಕೊಂಡಿರುತ್ತಾರೆ. ಅದು 1991 ಮಂಜೂರು ಆಗಿರುತ್ತದೆ. ಸದರಿ ವಿಚಾರವನ್ನು ನನಗೆ ನಮ್ಮ ತಂದೆ ಹೇಳಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್